ಕರ್ನಾಟಕ ವೃಕ್ಷಗಳ ಸಂರಕ್ಷಣಾ ಕಾಯಿದೆ ಬಗ್ಗೆ

೨೮೯. ಶ್ರೀಮತಿ ಲೀಲಾವತಿ ಆರ್ ಪ್ರಸಾದ್ (ಅಥಣಿ).—ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕರ್ನಾಟಕ ವೃಕ್ಷಗಳ ಸಂರಕ್ಷಣಾ ಕಾಯಿದೆ ೧೯೭೬ ಇದರ ೩ನೇ ಕಲಮಿನ ಅನ್ವಯ ಎಲ್ಲಾ ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವೃಕ್ಷ ಪ್ರಾಧಿಕಾರವನ್ನು ರಚಿಸಲಾಗಿದೆಯೇ ?

(ಆ) ಹಾಗಿದ್ದರೆ ಅಂತಹ ಪ್ರಾಧಿಕಾರವನ್ನು ಅಥಣಿ ತಾಲ್ಲೂಕಿಗೆ ರಚಿಸಲಾಗಿದೆಯೆ ಮತ್ತು ಯಾವಾಗ ? (ಸದಸ್ಯರುಗಳ ಹೆಸರುಗಳನ್ನು ನಮೂದಿಸುವುದು)

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ರಚಿಸಲಾಗಿದೆ.

(ಆ) ವೃಕ್ಷ ಪ್ರಾಧಿಕಾರವನ್ನು ಅಥಣಿ ತಾಲ್ಲೂಕಿಗೆ ಸರ್ಕಾರಿ ಪ್ರಕಟಣೆ ಸಂಖ್ಯೆ ಎಫ್‌ಎಫ್‌ಡಿ ೬೧ ಎಫ್‌ಟಿಎಸ್ ೮೨ ದಿನಾಂಕ ೧೧-೧-೧೯೮೩ ರಲ್ಲಿ ರಚಿಸಲಾಗಿದೆ. ಅವುಗಳಲ್ಲಿನ ನಾಮಕರಣ ಕೆಳಗಿನಂತಿವೆ.—

೧. ಅಧ್ಯಕ್ಷರು, ತಾಲ್ಲೂಕು ಅಭಿವೃದ್ಧಿ ಮಂಡಳಿ, ಅಥಣಿ.

೨. ಕ್ಷೇತ್ರಾಭಿವೃದ್ಧಿ ಅಧಿಕಾರಿ.

೩. ಉಪ ಅರಣ್ಯ ಸಂರಕ್ಷಣಾಧಿಕಾರಿ, ಗೋಕಾಕ್ ಇವರಿಂದ ನೇಮಿಸಲ್ಪಟ್ಟಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.

೪. ಜಿಲ್ಲಾ ತೋಟಗಾರಿಕೆ ಅಧಿಕಾರಿ.

೫. ಅಧ್ಯಕ್ಷರಿಂದ ನೇಮಿಸಲ್ಪಟ್ಟಿರುವ ಒಬ್ಬ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರು.

ತಾಲ್ಲೂಕು ಅಭಿವೃದ್ಧಿ ಮಂಡಳಿಗಳನ್ನು ರದ್ದುಗೊಳಿಸಲ್ಪಟ್ಟ ಜಿಲ್ಲಾ ಪರಿಷತ್ತು ಹಾಗೂ ಮಂಡಲ ಪಂಚಾಯಿತಿಗಳನ್ನು ರಚಿಸಲ್ಪಟ್ಟಿರುವುದರಿಂದ ನಿಷ್ಕ್ರಿಯವಾದ ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಸದಸ್ಯರಂಗಳ ಜಾಗದಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಸದಸ್ಯರಂಗಳ ನ್ನೊಳಗೊಂಡ ಸರ್ಕಾರಿ ಪ್ರಕಟಣೆಯನ್ನು ಹೊರಡಿಸಲಾಗುವುದು.

Modernising Handloom Industry.

185.(b) SMT. MANORAMA MADHWARAJ (Udupi).—Will the Minister for Small Scale Industries be pleased to state.

(a) Whether it is a fact that Government has failed to claim the Central grant under the Handloom cloth Reservation scheme during' 86 ;

(b) Whether it is fact that huge quantity of Handloom cloth has remained unsold in the State ;

(c) Whether it is also a fact that the Central Government has constituted a committee to modernise the Handloom Industry comprising of 6 official members and 3 non-official members ;

(d) Whether Government is aware that the Central Government has formulated scheme for providing working sheds of Handloom for the weavers ;

(e) If so, the action proposed to be taken by the Government in these lines ;

(f) Whether Government will consider starting a weaving Training Centres in Dakshina Kannada District ;

(g) If so, whether Central assistance will be obtained for the scheme ?

SRI B. A. JIVIJAYA (Minister for Small Scale Industries).—

(a) There is no central grant for Handloom Reservation but proposal for setting up of enforcement machinaries is under consideration of Government.

(b) No.

(c) Yes.

(d) Yes,

(e) Action has been already taken for purchase of handlooms to the Weavers.

(f) No.

(g) Does not arise.

ಪವರ್‌ಲೂಮ್ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ನೆರವನ್ನು ಕೋರಿ

೧೩೫.(ಸಿ) ಶ್ರೀಮತಿ ವಿನೋದಾ ವಿದ್ಯಾರಾಜ್ (ಉಡುಪಿ) —ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಪವರ್‌ಲೂಮ್ ಸಹಕಾರಿ ಸಂಘಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಸಹಾಯ ಲಭ್ಯವಿರುವುದು ಸರ್ಕಾರಕ್ಕೆ ಗೊತ್ತಿದೆಯೇ ;

(ಆ) ಹಾಗಿದ್ದಲ್ಲಿ ಕೇಂದ್ರದ ನೆರವಿನಿಂದ ದಕ್ಷಿಣ ಕನ್ನಡ ಹಾಗೂ ಇತರೆ ಜಿಲ್ಲೆಗಳಲ್ಲಿ ಸಹಕಾರಿ ವಲಯದಲ್ಲಿ ಪವರ್‌ಲೂಮ್‌ಗಳನ್ನು ಸ್ಥಾಪಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

(ಅ) ಅಂತಹ ಯೋಜನೆ ಇರುವುದಿಲ್ಲ.

(ಆ) ಉದ್ಭವಿಸುವುದಿಲ್ಲ.